ಕಟ್ಟುವುದಕ್ಕೆ ಐದು ಲಕ್ಷ ರೂಪಾಯಿ ದೇವಸ್ಥಾನದವರು ಕೊಟ್ಟರು. ಮೊದಲು ಇದಕ್ಕೆ ಸ್ಥಳವನ್ನು ಕೊಡುತ್ತೇವೆಂದು ಹೇಳಿದರೂ ಈಗ ತಪ್ಪಿಸಿಕೊಂಡಿದ್ದಾರೆ. ಆದುದರಿಂದ ಈಗಲೇ ರಸ್ತೆಗಾಗಿ ಸ್ಥಳವನ್ನು ಕೊಡುತ್ತೇವೆಂದು ಏನು ಮುಂದೆ ಬಂದಿದ್ದಾರೆ, ಅದನ್ನು ಶೀಘ್ರವಾಗಿ ಸ್ವಾಧೀನ ಪಡಿಸಿಕೊಂಡು ಈ ವರ್ಷವೇ ಸ್ವಲ್ಪ ಹಣವನ್ನು ಖರ್ಚು ಮಾಡಿ, ರಸ್ತೆಗಾಗಿ ಒಂದು ಶಂಕುಸ್ಥಾಪನೆಯನ್ನು ಮಾಡಿ ಕೆಲಸವನ್ನು ಪ್ರಾರಂಭ ಮಾಡಿದರೆ ಮುಂದಿನ ವರ್ಷ ಸುಲಭವಾಗುತ್ತದೆ. ಈ ವರ್ಷ ಅದನ್ನು ಮಾಡುವುದಕ್ಕೆ ಸಾಧ್ಯ ಉಂಟೇ ಎಂದು ಕೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ನಿರ್ದಿಷ್ಟವಾಗಿ ಹೇಳಿದ್ದೇನೆ. 92-93ರಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಸರಕಾರದ ವತಿಯಿಂದ ಹೇಳುತ್ತಿದ್ದೇನೆ. ರಸ್ತೆಗೆ ಜಾಗ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇದರ ಉದ್ದ ಸುಮಾರು 1.8 ಕಿಲೋಮೀಟರ್ ಆಗುತ್ತದೆ. ರಸ್ತೆ ಮಾಡುವುದಕ್ಕೆ 10 ಲಕ್ಷ ಆಗುತ್ತದೆ. ಸ್ಯಾಂಕ್ಷನ್ ಮಾಡಿರುತ್ತೇವೆ. 92 ರಿಂದ ಶುರು ಮಾಡಿಸುತ್ತೇವೆ.

ಬಂಟ್ವಾಳ ತಾಲ್ಲೂಕಿನಲ್ಲಿರುವ ರಸ್ತೆಗಳ ದುರಸ್ತಿ

2174 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬಂಟ್ವಾಳ ತಾಲ್ಲೂಕಿನ ಮಾಣಿ-ಉಳ್ಳಾಲ ಜಿಲ್ಲಾ ಪರಿಷತ್ ರಸ್ತೆ ಸಂಪೂರ್ಣ ದುರಸ್ತಿಯಾಗದೆ ಇರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇದು ಇಲ್ಲಿಯ ಪ್ರಾಮುಖ್ಯ ರಸ್ತೆಯಾದುದರಿಂದ ಇದನ್ನು ರಾಜ್ಯ ರಸ್ತೆ (ಲೋಕೋಪಯೋಗಿ)ಯನ್ನಾಗಿ ಮಾಡಿ ದುರಸ್ತಿ ಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಎಂದಿನಿಂದ ದುರಸ್ತಿ ಮಾಡಬಹುದು?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಈ ರಸ್ತೆಯು ಹಳ್ಳಿ ರಸ್ತೆಯಾಗಿದ್ದು ಜಿಲ್ಲಾ ಮುಖ್ಯ ರಸ್ತೆಯ ದರ್ಜೆಗೆ ಮೇಲ್ದರ್ಜೆಗೇರಿಸಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವವರೆವಿಗೆ, ಲಭ್ಯವಿರುವ ಅನುದಾನದಲ್ಲಿ ನಿರ್ವಹಣೆ ಮಾಡಿ ಸುಸ್ಥಿತಿಯಲ್ಲಿಡುವಂತೆ ಮಂಗಳೂರು ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಅಧ್ಯಕ್ಷರೇ, ಈ ಮಾಣಿ - ಉಳ್ಳಾಲ ರಸ್ತೆ ಬಹಳ ಪ್ರಮುಖವಾದುದು. ಇದು ಕೇರಳ ಮತ್ತು ಕರ್ನಾಟಕ ಅಂತರರಾಜ್ಯ ರಸ್ತೆ ಮತ್ತು ಹಲವಾರು ಗ್ರಾಮಗಳನ್ನು ಇದು ಸೇರಿಸುತ್ತದೆ. ಅದು ಮಾತ್ರವಲ್ಲ, ಮಂಗಳೂರು-ಬೆಂಗಳೂರು ಹೈವೇ ಏನಿದೆ ಇದು ಈ ವರ್ಷ ಅತಿಯಾದ ಮಳೆಯಿಂದ, ನಡುವೆ ಏನು ಬ್ರಿಡ್ಜಸ್ ಇದೆ ಅದು ತುಂಬಾ ಹಾಳಾಗಿ ಎರಡು ಮೂರು ದಿನ ಬಂದ್ ಆಗಿತ್ತು. ನೆರೆ ಬಂದಾಗ ಕೂಡಾ ಇದು ಬದಲಿ ರಸ್ತೆ ಆಗಿತ್ತು. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಇದು ಬದಲಿ ರಸ್ತೆಯಾಗಿದೆ. ಇಷ್ಟು ಪ್ರಾಮುಖ್ಯವಾದ ರಸ್ತೆ, ತುಂಬಾ ಮಳೆಯಿಂದ ದೊಡ್ಡ ದೊಡ್ಡ ಹೊಂಡ ಬಿದ್ದು ವಾಹನ ಸಂಚಾರ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ಜಿಲ್ಲಾ ಪರಿಷತ್ ರಸ್ತೆ. ಇದನ್ನು ಮೇಲ್ದರ್ಜೆಗೆ ಏರಿಸಿ, ಈ ವರ್ಷ ಜಿಲ್ಲಾ ಪರಿಷತ್ ಎಂಜಿನಿಯರಿಂಗ್ ವಿಭಾಗದವರು ಅದರ ರಿಪೇರಿಗಾಗಿ 35 ಲಕ್ಷ ರೂಪಾಯಿಗಳ ಅಂದಾಜು ತಯಾರಿಸಿದ್ದಾರೆ.

ಈ ರಸ್ತೆಯನ್ನು ಕೂಡಲೇ ಮೇಲ್ದರ್ಜೆಗೇರಿಸಿ ತಕ್ಷಣ ಇದರ ರಿಪೇರಿಗೆ 35 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ, ಕೂಡಲೇ ರಿಪೇರಿ ಮಾಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ : ಅಧ್ಯಕ್ಷರೇ, ಜಿಲ್ಲಾ ಪರಿಷತ್‌ನವರು ಈ ಸಾಲಿನಲ್ಲಿ ಸುಮಾರು 47 ಸಾವಿರ ರೂಪಾಯಿಗಳನ್ನು ಈ ರಸ್ತೆ ರಿಪೇರಿ ಮಾಡುವುದಕ್ಕೋಸ್ಕರ ಇಟ್ಟಿದ್ದಾರೆ. ಇದು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರತಕ್ಕಂಥ ರಸ್ತೆ. ಇದನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿಸಿ ಹೆಚ್ಚಿನದಾಗಿ ವೆಚ್ಚ ಮಾಡಬೇಕೆಂದು ಹೇಳಿ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದನ್ನು ಪರಿಶೀಲಿಸಿ ಮುಂದಿನ ಆಯವ್ಯಯದಲ್ಲಿ ಇದನ್ನು ಸೇರಿಸಿ, ಇದನ್ನು ತೆಗೆದುಕೊಳ್ಳಬೇಕೆಂದು ಸರಕಾರದ ನಿರ್ಧಾರ ಇದೆ. 92-93ರಲ್ಲಿ ಈ ಕೆಲಸ ಪೂರ್ಣ ಮಾಡಬೇಕೆಂದು ಸರಕಾರದ ಇಚ್ಛೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಈ ರಸ್ತೆಯನ್ನು ಆದಷ್ಟು ಬೇಗ ಮೇಲ್ದರ್ಜೆಗೇರಿಸಿ. ಈಗೇನು ರಿಪೇರಿಗೆ ಹಣ ಇಟ್ಟಿದ್ದಾರೆ ಅದು ಏನೇನೂ ಸಾಲದು. ಅದನ್ನು ಜಾಸ್ತಿ ಮಾಡಿ ರಿಪೇರಿ ಮಾಡಬೇಕು. ಕೂಡಲೇ 35 ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ : ಪಿ.ಡಬ್ಲ್ಯು.ಡಿ ಯವರು ಇದಕ್ಕಾಗಿ 20 ಸಾವಿರ ರೂಪಾಯಿಗಳನ್ನು ಮೊದಲೇ ಖರ್ಚು ಮಾಡಿರುತ್ತಾರೆ. ಜಿಲ್ಲಾ ಪರಿಷತ್‌ನವರು 42 ಸಾವಿರ ರೂಪಾಯಿ ಇಟ್ಟಿದ್ದಾರೆ. ಅದು ಸಾಲದು ಎಂದು ನನಗೂ ಚೆನ್ನಾಗಿ ಗೊತ್ತು. ಈ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಹೆಚ್ಚಿನ ಹಣ ಕೊಟ್ಟು ಮುಂದಿನ ವರ್ಷ ರಿಪೇರಿ ಕಾರ್ಯ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹೇಮಾವತಿ ಯೋಜನೆ ಕಾಮಗಾರಿ ಕೆಲಸ

2210 - ಶ್ರೀ ಎಸ್. ಶಫಿಅಹ್ಮದ್ (ತುಮಕೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಯೋಜನೆಯ ಮುಖ್ಯ ನಾಲೆಯ ಕಾಮಗಾರಿಗಳು ಯಾವ ದಿನಾಂಕದಂದು ಪೂರ್ಣಗೊಳ್ಳುತ್ತವೆ.

ಆ) ಈ ನಾಲೆಯ ಕೆಲಸಗಳಿಗಾಗಿ ಇದುವರೆಗೆ ವ್ಯಯ ಮಾಡಲಾದ ಹಣ ಎಷ್ಟು? (ವರ್ಷವಾರು ಕೆಲಸಗಳ ಪ್ರಗತಿಯನ್ನು ಕೊಡುವುದು)

ಇ) ಯಾವ ದಿನಾಂಕದಿಂದ ಇದನ್ನು ಪ್ರಾರಂಭಿಸಲಾಯಿತು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಹೇಮಾವತಿ ಯೋಜನೆಯ ಮುಖ್ಯ ನಾಲೆಯ ಕಾಮಗಾರಿಗಳನ್ನು ಮಾರ್ಚ್ 1985ರ ವೇಳೆಗೆ ಪೂರ್ಣಗೊಳಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆ) ಹೇಮಾವತಿ ಎಡದಂಡೆಯ ಕಾಮಗಾರಿಗಳು ಮತ್ತು ತುಮಕೂರು ನಾಲಾ ಕಾಮಗಾರಿಗಳು ಹಾಗೂ ನಾಗಮಂಗಲ ಶಾಖಾ ನಾಲೆಯ ಕಾಮಗಾರಿಗಳಿಗೆ ವ್ಯಯ ಮಾಡಿದ ಹಣದ ವಿವರಗಳು ಈ ಕೆಳಕಂಡಂತಿವೆ.

ವರ್ಷ	ವ್ಯಯ(ಲಕ್ಷ ರೂಗಳಲ್ಲಿ)
1979-80	2,561.30
1980-81	665.57
1981-82	672.69